ನಿಯಮ ೪೫ (ಎ) ಗೆ ತಿದ್ದುಪಡಿ ಮಾಡಿ ಆಯ್ಕೆ ಸಮಿತಿಯನ್ನು ರಚಿಸಿ ದಿನಾಂಕ ೮-೧೦-೧೯೮೭ ರಂದು ಹೊರಡಿಸಿರುವ ಆದೇಶದಿಂದ ಅಲ್ಪ ಸಂಖ್ಯಾತರ ಶಾಲೆಗಳಿಗೆ ಯಾವ ತೊಂದರೆ ಆಗುವುದಿಲ್ಲ.

೧-೦೦ ಪಿ.ಎಂ.

ಶ್ರೀ ಎಂ.ಎಂ. ಹಿಂಡಸಗೇರಿ.—ಈ ಜಿ.ಓ ಬರುವುದಕ್ಕಿಂತ ಮುಂಚಿತವಾಗಿ ಅಲ್ಪ ಸಂಖ್ಯಾತರ ಸಂಸ್ಥೆಯಲ್ಲಿ ನಮ್ಮ ಸಂವಿಧಾನದ ಪ್ರಕಾರ ಯಾವ ಹುದ್ದೆಗಾರರೂ ನೇಮಕಾತಿಯನ್ನು ಮಾಡಿಕೊಳ್ಳುವುದಕ್ಕೆ ಅವಕಾಶ ಇತ್ತು. ಆದರೆ ಈ ಆರ್ಡರ್ ಬಂದ ನಂತರ ಸರ್ಕಾರ ಆ ಒಂದು ಅಧಿಕಾರವನ್ನು ತೆಗೆದುಕೊಂಡಿದೆ. ಮಿಾಸಲಾತಿಯನ್ನು ಅನುಸರಿಸಲಿಕ್ಕೆ ಅಲ್ಪ ಸಂಖ್ಯಾತರ ಇನ್ಸಿಟಿಟ್ಯೂಷನ್‌ಗಳಿಗೆ ರಾಜ್ಯಾಂಗದ ಕಲಮ್ ೨೯-೩೦ರ ಪ್ರಕಾರ ಪೂರ್ಣ ಹಕ್ಕು ಇತ್ತು. ಆದ ಕಾರಣ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ ಅದೇ ರೀತಿಯ ಹಕ್ಕನ್ನು ಪುನಃ ಕೊಡಬೇಕೆಂದು ಸರ್ಕಾರವನ್ನು ತಮ್ಮ ಮೂಲಕ ಒತ್ತಾಯಿಸುತ್ತಿದ್ದೇನೆ.

ಶ್ರೀ ಬಿ. ಸೋಮಶೇಖರ್ —ಮಾನ್ಯ ಉಪಾಧ್ಯಕ್ಷರೇ, ಈಗ ಹೊರಡಿಸಿರತಕ್ಕ ಆಜ್ಞೆ ಅಲ್ಪ ಸಂಖ್ಯಾತರ ಆಡಳಿತ ಮಂಡಳಿಗೆ ಅನ್ವಯಿಸುವುದಿಲ್ಲ. ಆದ್ದರಿಂದ ಮಾನ್ಯ ಸದಸ್ಯರ ಪ್ರಶ್ನೆ ಇದರಿಂದ ಉದ್ಭವಿಸುವುದಿಲ್ಲ.

ಶ್ರೀ ಎಂ.ಎಂ. ಹಿಂಡಸಗೇರಿ.—ಅಲ್ಪ ಸಂಖ್ಯಾತರ ಸಂಸ್ಥೆಗಳಿಗೆ ಇದು ಅಲಾಗು ಆಗುವುದಿಲ್ಲ ಎಂಬುದಾಗಿ ಸ್ಪಷ್ಟವಾದ ಸ್ಟೇಟ್‌ಮೆಂಟ್‌ನ್ನು ಮಾನ್ಯ ಮಂತ್ರಿಗಳು ನೀಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳ ಹೇಳಿಕೆ ಸ್ಪಷ್ಟವಾಗಿದೆ.

ಶ್ರೀ ಬಿ. ಸೋಮಶೇಖರ್.—ನನ್ನ ಸ್ಟೇಟ್‌ಮೆಂಟ್ ಸ್ಪಷ್ಟವಾಗಿಯೇ ಇದೆ.

ವಿದ್ಯುತ್ ಕೊರತೆಯಿಂದಾಗಿ ರಾಜ್ಯದ ಕೈಗಾರಿಕೆಗಳಿಗೆ ಹಾಗೂ ಜನರಿಗೆ ತೊಂದರೆಯಾಗಿರುವುದು

ಶ್ರೀ ಆರ್. ವೆಂಕಟರಾಮಯ್ಯ.—ರಾಜ್ಯದಲ್ಲಿ ವಿದ್ಯುತ್ ಕೊರತೆಯಿಂದಾಗಿ ಕೈಗಾರಿಕೆಗಳಿಗೆ ಹಾಗೂ ಜನರಿಗೆ ತೊಂದರೆಯಾಗಿರುವುದರಿಂದ ನಾನು ವಿದ್ಯುತ್ ರಾಜ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

SRI LAXMI NARASIMHAIAH (Hon. State Minister for Power).—Honourable Speaker Sir,

Except Raichur Thermal Station, all the Generating Station in the State are Hydel Stations. The generation of Power in these Hydel Stations depends on the inflow of water to their main Reservoirs during Monsoon.

During 1987, the monsoon was very poor. The inflow in to the two major Hydro Reservoirs viz. Linganamakki and Supa has been very poor, The inflow to Linganamakki Reservoir is only 75.2 TMC as against the average inflow of 168 TMC and in supa Reservoir the inflow is 57.6 TMC as against the average inflow of 129 TMC. With the result, the internal generation came down considerably.

The estimated availability of energy for the year 1987 88 including Imports and States share of Central Projects is 10307 MU

as against the unrestricted requirement of 16900 MU. This leaves a deficit of 6593 MU. To cover this deficit, imposition of cut on consumption by the consumers was inevitable, Cut on consumption is imposed on all categories of consumers except I.P. Sets and Electric Crematoria. The cut varies from 10% to 80% Demand cut is also imposed on H.T consumers of 1001 KVA and above and this varies from 10% to 20%.

To reduce the severity of power cut, consumers are permitted to instal captive Generator Sets. Power assistance from neighbouring States is being availed to the maximum extent.

† ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಸುಮಾರು ೬ ಸಾವಿರ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗಳು ಮುಚ್ಚಿವೆ. ಒಂದು ಲಕ್ಷಕ್ಕೂ ಮೇಲ್ಪಟ್ಟು ಜನರು ಬೀದಿ ಪಾಲಾಗಿದ್ದಾರೆ. ಈ ರೀತಿ ಕಾರ್ಖಾನೆಗಳು ಮುಚ್ಚಲ್ಪಟ್ಟಿರುವುದರಿಂದ ಇಂಡಸ್ಟ್ರೀಸ್ ಅನ್ ರಿಸ್ಟ್ರೈ ಆಗಿವೆ. ವ್ಯವಸಾಯ ರಂಗದಲ್ಲೂ ಕೂಡ ಬಹಳ ಅನಾಹುತವಾಗಿದೆ. ಹಗಲೊತ್ತು ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಬೇಕೆಂದು ಒತ್ತಾಯ ಮಾಡುತ್ತಲೇ ಇದ್ದರೂ ಕೂಡ ದಿನಕ್ಕೆ ೨೦ ಸಾರಿ ವಿದ್ಯುಚ್ಛಕ್ತಿ ಹೊರಟು ಹೋಗುತ್ತದೆ, ನಂತರ ಬರುತ್ತದೆ. ಆದರೂ ಇವತ್ತಿಗೂ ಹಗಲೊತ್ತು ವಿದ್ಯುತ್‌ನ್ನು ವ್ಯವಸಾಯ ರಂಗಕ್ಕೆ ಕೊಡಬೇಕೆಂದು ಒತ್ತಾಯ ಮಾಡಿಕೊಂಡು ಬರುತ್ತಿದ್ದರೂ ರಾತ್ರಿ ಹೊತ್ತೇ ವಿದ್ಯುಚ್ಛಕ್ತಿಯನ್ನು ಕೊಡುತ್ತಿದ್ದಾರೆ. ಇದರಿಂದ ರೈತರಿಗೆ ತುಂಬಾ ತೊಂದರೆಯಾಗಿದೆ. ನಾವು ಏನೇ ಹೇಳಿದರೂ ನೀವು ಮಾತ್ರ ಮಾಡಿದ್ದನ್ನೇ ಮಾಡುತ್ತಿದ್ದೀರಿ. ಒಳ್ಳೆಯದನ್ನು ಮಾತ್ರ ಮಾಡಿಯೇ ಇಲ್ಲ. ರಾತ್ರಿ ಹೊತ್ತು ವಿದ್ಯುಚ್ಛಕ್ತಿಯನ್ನು ವ್ಯವಸಾಯರಂಗಕ್ಕೆ ಕೊಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಕೆಲವುಕಡೆ ಸರ್ಪ್ಲಸ್ ಬೆಳೆಗಳು ಇರುತ್ತವೆ. ಉದಾಹರಣೆಗೆ [illegible] ಆಲೂಗಡ್ಡೆ ಬೆಳೆಗೆ ಹಗಲೊತ್ತೇ ಹಂಪಾರಾಗಿ ನೋಡಿಕೊಂಡು ನೀರನ್ನು ಕೊಡಬೇಕಾಗುತ್ತದೆ. ಬೀದರ್, ಕೋಲಾರ ಜಿಲ್ಲೆಗಳಲ್ಲಿ ಡೀಸಲ್ ಯೂನಿಟ್‌ಗಳನ್ನು ಪ್ರಾರಂಭ ಮಾಡುತ್ತೇವೆಂದು ಈ ಹಿಂದೆಯೇ ಹೇಳಿದ್ದರೂ ಇದುವರೆವಿಗೂ ಮಾಡಿಲ್ಲ. ಇದರಿಂದ ಜನತೆ ಕೂಡ ನಿಮ್ಮನ್ನು ಬಯ್ಯುತ್ತಿದೆ. ಆರೂವರೆ ಗಂಟೆಗೆ ಕರೆಂಟ್ ಹೋಗುತ್ತದೆ. ಪುನಃ ಹತ್ತು ನಿಮಿಷಕ್ಕೆ ಬರುತ್ತದೆ. ಮತ್ತೆ ಹತ್ತು ನಿಮಿಷ ಬರುತ್ತದೆ. ಈ ರೀತಿಯಾಗಿ ಕಾಟ ಕೊಡುತ್ತಿರುವಾಗ, ಯಾರೋ ಹೇಳಿದರಂತೆ, ಏನೆಂದರೆ ಬೆಂಗಳೂರಿನಲ್ಲಿ ವಿಧಾನಸೌಧದಲ್ಲಿ ಮತ್ತು ಶಾಸಕರ ಭವನದಲ್ಲಿ ಕರೆಂಟ್ ಹೋಗಿಬಿಟ್ಟರೆ ನಮ್ಮ ಕಷ್ಟ ಏನು ಎಂದು ಅರ್ಥವಾಗುತ್ತಿತ್ತು, ಜನಗಳ ಕಷ್ಟ ತಿಳಿಯುತ್ತಿತ್ತು ಎಂದು ಈ ಪರಿಸ್ಥಿತಿಯನ್ನು ಮೊದಲು ಸುಧಾರಣೆ ಮಾಡಬೇಕು. ಬೀದರ್ ಕೋಲಾರಗಳಲ್ಲಿ ಕೆಲವು ಯೂನಿಟ್‌ಗಳನ್ನು ಸ್ಥಾಪನೆ ಮಾಡಿಲ್ಲ. ಜನರು ಕೇಳುತ್ತಿದ್ದಾರೆ ಎಂದು ಸುಮ್ಮನೆ ಇಲ್ಲಿ ಸ್ಟೇಟ್‌ಮೆಂಟ್ ಕೊಟ್ಟರೆ ಸಾಲದು. ಇದನ್ನು ಸುಧಾರಣೆ ಮಾಡುವುದಕ್ಕೆ ಏನು ಮಾಡುತ್ತೀರಿ ? ಹಗಲು ಹೊತ್ತೇ ರೈತರಿಗೆ ಪಂಪುಸೆಟ್ಟುಗಳಿಗೆ ವಿದ್ಯುತ್ ಕೊಡುವುದಕ್ಕೆ ಒಪ್ಪಿಕೊಳ್ಳುತ್ತೀರಾ ? ನಿಮ್ಮ ಮಾತನ್ನು ವಿದ್ಯುಚ್ಛಕ್ತಿ ಮಂಡಲಿಯವರು ಕೇಳುವುದಿಲ್ಲ. ಇದರ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಲಕ್ಷ್ಮೀನರಸಿಂಹಯ್ಯ.— ಮಾನ್ಯ ಸಭಾಧ್ಯಕ್ಷರೇ, ನಮ್ಮ ವಿದ್ಯುಚ್ಛಕ್ತಿ ಪರಿಸ್ಥಿತಿ ಏನಿದೆ ಎಂದು ನಾನು ಹೇಳಿದ್ದೇನೆ. ವಿದ್ಯುತ್ ಕೊರತೆಯೇ ಈ ಎಲ್ಲಾ ಸಮಸ್ಯೆಗಳಿಗೆ ಕಾರಣ ಮೂರನೆಯ ಒಂದು ಭಾಗದಷ್ಟು ವಿದ್ಯುತ್ ಉತ್ಪಾದನೆ ಮಾಡಿ ಎಲ್ಲರಿಗೂ ಕೇಳಿದಷ್ಟು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ದುರಾದೃಷ್ಟವಶಾತ್ ನಾವು ಜಲ ವಿದ್ಯುತ್ ಯೋಜನೆಗಳನ್ನು ನಂಬಿಕೊಂಡಿರುವುದರಿಂದ ಮಂತ್ರಿ ಈ ಜಲಾಶಯಗಳಲ್ಲಿ ನೀರು ಇಲ್ಲದೇ ಇರುವುದರಿಂದ ಈ ಕೊರತೆ ಜಾಸ್ತಿಯಾನಿದೆ. ನೆರೆರಾಜ್ಯಗಳಿಂದ ಎಷ್ಟು ಹೆಚ್ಚಿಗೆ ಪಡೆಯಬಹುದೋ, ಎನ್.ಟಿ.ಪಿ.ಸಿ. ಯಿಂದ ಹೆಚ್ಚಿಗೆ ಏನು ವಿದ್ಯುತ್ ಅನ್ನು ಪಡೆಯಬಹುದೋ ಅಷ್ಟನ್ನೂ ನಾವು ಪಡೆದುಕೊಂಡಿದ್ದೇವೆ. ಈಗಾಗಲೇ ತಮಗೆ ಗೊತ್ತಿರುವ ಹಾಗೆ ೧೨೦ ಮೆಗಾವಾಟ್ ಯಲಹಂಕದ ಯೂನಿಟ್‌ಗೆ ಕೇಂದ್ರ ಸರ್ಕಾರದಿಂದ ಕ್ಲಿಯರೆನ್ಸ್ ಸಿಕ್ಕಿದೆ. ಈ ಕೆಲಸ ಪ್ರಾರಂಭವಾಗುತ್ತದೆ. ಅದು ಬಿಟ್ಟರೆ ಮೂರು ಜನರೇಟರುಗಳಿಂದ ೨೭ ಮೆಗಾವ್ಯಾಟ್

ಯೋಜನೆಗೆ ಕೇಂದ್ರ ಸರ್ಕಾರದಿಂದ ಕ್ಲಿಯರೆನ್ಸ್‌ಗೋಸ್ಕರ ಕಾಯುತ್ತಿದ್ದೇವೆ. ಅದನ್ನು ಕೂಡ ಪ್ರಾರಂಭ ಮಾಡುತ್ತೇವೆ. ಮುಂದಿನವರ್ಷ ಸೆಪ್ಟೆಂಬರ್ ಹೊತ್ತಿಗೆ ೨೮೯ ಮೆಗಾವ್ಯಾಟ್‌ನ ವರಾಹಿ ಯೋಜನೆ ಪ್ರಾರಂಭವಾಗುತ್ತದೆ. ಮುಂದಿನ ಜೂನ್ ತಿಂಗಳವರೆಗೆ, ಮಳೆ ಬೀಳುವವರೆಗೆ ಪರಿಸ್ಥಿತಿ ಸುಧಾರಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತೇನೆ.

ಶ್ರೀ ಸಿ. ಭೈರೇಗೌಡ.— ಇವತ್ತು ರೈತರು ಒಂದು ಮೂಟೆ ಆಲೂಗಡ್ಡೆಗೆ ಆರುನೂರು ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಸಾವಿರಾರು ರೂಪಾಯಿಗಳ ಬಂಡವಾಳ ಹೂಡಿ, ಖರ್ಚು ಮಾಡಿದ್ದಾರೆ. ಬಾಯಲ್ಲಿ ಲಕ್ಷಕಾಳು ಹಾಕಿಕೊಂಡು ಅವರು ಕಾಯುತ್ತಿದ್ದಾರೆ. ಅವರಿಗೆ ಕರೆಂಟ್ ಇಲ್ಲದಿದ್ದರೆ ಕೋಟ್ಯಾಂತರ ರೂಪಾಯಿಗಳ ನಷ್ಟವಾಗುತ್ತದೆ. ಮುಂದಿನವರ್ಷ ವರಾಹಿ ಯೋಜನೆಯನ್ನು ತಂದುಕೊಡುತ್ತೇವೆ ಎಂದು ಹೇಳಿದರೆ, ಅವರಿಗೆ ಆಗತಕ್ಕಂಥ ನಷ್ಟವನ್ನು ಕೊಡತಕ್ಕವರು ಯಾರು ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಅವರ ಒಂದು ಗಮನ ಸೆಳೆಯುವ ಸೂಚನೆಯಲ್ಲಿ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿದರು. ಅದಕ್ಕೆ ನಾನು ಉತ್ತರ ಹೇಳಬೇಕಾಗಿ ಬಂತು. ಶ್ರೀ ವೆಂಕಟರಾಮಯ್ಯನವರ ಮತ್ತು ಶ್ರೀ ಬೈರೇಗೌಡರ ಕಳಕಳಿ ಏನೆಂಬುದು ನನಗೆ ಚೆನ್ನಾಗಿ ಅರ್ಥ ವಾಗಿದೆ. ನಾನು ಕೂಡ ಹಳ್ಳಿಯಿಂದ ಬಂದವನು. ರೈತರಿಗೆ ತೊಂದರೆಯಾಗದ ರೀತಿಯಲ್ಲಿ ವ್ಯವಸ್ಥೆ ಮಾಡುತ್ತಿದ್ದೇವೆ. ೨೯ನೇ ತಾರೀಖು ಪವರ್ ರಿವ್ಯೂ ಕಮಿಟಿ ವಿಸ್ತಾರಿಂಗ್ ಇದೆ. ಏನೇನು ಪ್ರಾಬ್ಲಮ್ಸ್ ರೈಸ್ ಆಗಿದೆ, ಏನು ಹೆಚ್ಚು ಸೌಲಭ್ಯವನ್ನು ಕೊಡಲಿಕ್ಕೆ ಸಾಧ್ಯವೆಂದು ಈ ಪವರ್ ರಿವ್ಯೂ ಕಮಿಟಿಯಲ್ಲಿ ವಿಚಾರಣೆ ಮಾಡಿ ಉತ್ತಮವಾದ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಸಿ. ಭೈರೇಗೌಡ.—ಒಂದು ದಿವಸದಲ್ಲಿ ಆರು ಗಂಟೆ ಕಾಲ.....

ಉಪಾಧ್ಯಕ್ಷರು. —ತಾವು ಉಪಪ್ರಶ್ನೆಯನ್ನು ಕೇಳುವುದಕ್ಕೆ ಬರುವುದಿಲ್ಲ:

ಶ್ರೀ ಸಿ. ಭೈರೇಗೌಡ.—ಅವರು ಕೇಳಿ ಆದಮೇಲೆ ನನಗೆ ಅವಕಾಶ ಕೊಡಿ.

ಶ್ರೀ ಆರ್ ವೆಂಕಟರಾಮಯ್ಯ.— ವರಾಹಿ ಯೋಜನೆಯನ್ನು ಮುಂದಿನ ವರ್ಷ ಮಾಡು ತ್ತಿದ್ದಾರೆ. ಈ ಬೇಡಿಕೆ ಹೋದಸಲವೂ ಇತ್ತು. ಆಗ ಖಿಷಿ ವರ್ಸೆಂಟ್ ಪವರ್ ಕಟ್ ಮಾಡಿದ್ದರು. ಮುಂದಿನ ವರ್ಷ ಮಾಡುತ್ತೇವೆ, ಹಿಂದಿನ ವರ್ಷ ಮಾಡಿದ್ದಾಗಿದೆ ಎಂದು ಹೇಳುವುದಕ್ಕೆ ಬದಲು ಕೇಂದ್ರ ಸರ್ಕಾರವನ್ನು ಒತ್ತಾಯಮಾಡಿ ವರಾಹಿ ಯೋಜನೆಗೆ ಕ್ಲಿಯರೆನ್ಸ್ ತೆಗೆದುಕೊಂಡಿದ್ದರೆ ಆಗುತ್ತಿತ್ತು. ಥರ್ಮಲ್ ಪ್ಲಾಂಟ್ ಕೂಡ ಆಗುತ್ತಿತ್ತು. ದಯವಿಟ್ಟು ಈಗಲಾದರೂ ತಕ್ಷಣ ವರಾಹಿ ಯನ್ನು ಕಂಪ್ಲೀಟ್ ಮಾಡುತ್ತೀರಾ ? ಇಲ್ಲದೇ ಇದ್ದರೆ ಕೆಲವು ಯೋಜನೆಗಳು ಏನಿವೆ, ಅವುಗಳನ್ನು ತತ್‌ಕ್ಷಣ ತೆಗೆದುಕೊಂಡು ವಿದ್ಯುತ್ ಅನ್ನು ಒದಗಿಸಿಕೊಡುತ್ತೀರಾ ? ಹಗಲು ಹೊತ್ತು ರೈತರಿಗೆ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಬಹುದೇನೋ ಎಂದು ನಾನು ಸ್ಪಷ್ಟವಾಗಿ ಕೇಳುತ್ತೇನೆ. ವಾರಾಹಿ ಯೋಜನೆ ೧೯೭೪ ರಲ್ಲಿಯೇ ಪ್ರಾರಂಭವಾಗಿದೆ. ಮುಂದಿನ ವರ್ಷ ಆಗಸ್ಟ್ ಅಥವಾ ಸೆಪ್ಟೆಂಬರ್ ತಿಂಗಳಲ್ಲಿ ಉತ್ಪಾದನೆ ಪ್ರಾರಂಭ ಮಾಡಬೇಕು. ಷೆಡ್ಯೂಲ್ ಪ್ರಕಾರ ಕೆಲಸ ಆಗುತ್ತಾ ಇದೆ ಜನರೇಷನ್ ಕೂಡ ಪ್ರಾರಂಭವಾಗುತ್ತದೆ. ಕೆಲವಕ್ಕೆ ಸೆಂಟ್ರಲ್ ಗವರ್ನಮೆಂಟ್‌ನಿಂದ ಕ್ಲಿಯರೆನ್ಸ್ ಸಿಕ್ಕಿ, ಇಂಟರ್‌ನ್ಯಾಷನಲ್ ಟೆಂಡರ್ ಕರೆದು ಫೈನಲೈಸ್ ಮಾಡಿರುವಂತಹ ಸಮಸ್ಯೆ ಇತ್ತು. ಈಗ ಇವೆಲ್ಲಾ ಕೊನೆಯ ಹಂತಕ್ಕೆ ಬಂದಿವೆ. ಯಾವುದೇ ಯೋಜನೆಯನ್ನು ೨ ವರ್ಷಕ್ಕೆ ಕಡಿಮೆ ಪ್ರಾರಂಭ ಮಾಡುವುದಕ್ಕಾಗುವುದಿಲ್ಲ. ಪೈಪ್‌ಲೈನ್ ಮತ್ತು ಥರ್ಮಲ್ ಯೂನಿಟ್‌ಗಳಿಗೆ ೫-೬ ವರ್ಷಗಳಾಗುತ್ತದೆ. ನ್ಯಾಷನಲ್ ಥರ್ಮಲ್ ಪವರ್ ಕಾರ್ಪೊರೇಷನ್‌ನಿಂದ ಪವರ್ ತೆಗೆದುಕೊಳ್ಳುವ ಅಥವಾ ಪಕ್ಕದ ರಾಜ್ಯದಿಂದ ತಗೆದುಕೊಳ್ಳುವ ವ್ಯವಸ್ಥೆಯಾದರೆ ಏನಾದರೂ ಪರಿಸ್ಥಿತಿ ಉತ್ತಮ ವಾಗುತ್ತದೆಯೇ ಎಂಬ ವಿಚಾರವಾಗಿ ೨೯ನೇ ತಾರೀಖು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಎಂ. ಲೇವಣಸಿದ್ದಯ್ಯ.—ರೈತರಿಗೆ ಹಗಲು ಹೊತ್ತಿನಲ್ಲಿಯೇ ಬೋರ್‌ವೆಲ್‌ಗಳಿಗೆ ಪವರ್ ಕೊಡುವುದಕ್ಕಾಗುತ್ತಿಲ್ಲ. ಇದನ್ನು ಸರಿಪಡಿಸುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.— ಈಗ ಸಂಜೆ ೬ ಗಂಟೆಯಿಂದ ಬೆಳಿಗ್ಗೆ ೬ ಗಂಟೆಯವರೆಗೆ ಕತ್ತಲು ಎಂದು ಹೇಳಿ ಪವರ್ ತೆಗೆಯಬಾರದು ಎಂದು ನಿಯಮ ಹಾಕಿಕೊಂಡಿದ್ದೇವೆ. ಉಳಿದ ಬೆಳಿಗ್ಗೆ ೬ ಗಂಟೆಯಿಂದ ಸಾಯಂಕಾಲ ೬ ಗಂಟೆಯವರೆಗೆ ೧೨ ಗಂಟೆ ಉಳಿಯುತ್ತದೆ. ನಾವು ಈ ವೇಳೆಯಲ್ಲಿಯೇ

ಪವರ್ ಕಟ್ ಮಾಡಬೇಕಾಗುತ್ತದೆ. ಆದುದರಿಂದ ಅಲ್ಲಿನ ಪ್ರತಿನಿಧಿಗಳು ಯಾವ ಟೈಮ್‌ನಲ್ಲಿ ಕಟ್ ಮಾಡಿದರೆ ಅನುಕೂಲ ಎಂದು ಹೇಳುತ್ತೀರೋ ಆದರಂತೆ ನಾವು ವ್ಯವಸ್ಥೆ ಮಾಡುವುದಕ್ಕೆ ಸಿದ್ಧವಾಗಿದ್ದೇವೆ.

ಶ್ರೀ ಸಿ. ಭೈರೇಗೌಡ.—ರೈತ ಪ್ರತಿನಿಧಿಗಳ ಜೊತೆ ಮಾತನಾಡುವಾಗ ಸರ್ಕಾರದವರು ಒಪ್ಪಿದ್ದಾರೆ. ಮಾನ್ಯ ಬೊಮ್ಮಾಯಿಯವರೂ ಒಪ್ಪಿದ್ದಾರೆ. ಆದುದರಿಂದ ಈಗಾಗಲೇ ಹೇಳಿರತಕ್ಕಂಥಾದನ್ನು ಕಾರ್ಯರೂಪಕ್ಕೆ ತರಬೇಕೆಂದು ವಿನಂತಿಸುತ್ತೇನೆ.

ಉಪಾಧ್ಯಕ್ಷರು.—ತಾವು ಬೇರೆ ರೀತಿಯಲ್ಲಿ ಸೂಚನೆ ಕೊಡಿ. ಅದಕ್ಕೆ ಉತ್ತರ ಹೇಳಂತ್ತಾರೆ.

ನಿಯಮ ೩೩ಳಿರ ಮೇರೆಗೆ

ಉಪಾಧ್ಯಕ್ಷರು.—ಈಗ ೩೩ಳಿರ ನಿಯಮದ ಮೇರೆಗೆ ಬಂದಿರತಕ್ಕಂಥ ನೋಟೀಸುಗಳನ್ನು ಓದುತ್ತೇನೆ. ಮೊದಲಿಗೆ ಶ್ರೀ ಮಾಲೀಕಯ್ಯ ಗುತ್ತೇದಾರ್–ಅಬ್ಸೆಂಟ್, ಶ್ರೀ ಹೆಚ್.ಬಿ.ದ್ಯಾವೀರಪ್ಪ–ಅಬ್ಸೆಂಟ್, ನೆಕ್ಸ್‌ಟ್ ಶ್ರೀ ಬಿ.ಎಸ್. ಯಡಿಯೂರಪ್ಪ ;

(1) ಶಿಕಾರಿಪುರ ತಾಲ್ಲೂಕಿನಲ್ಲಿ ಭೀಕರ ಬರಗಾಲವಿದ್ದರೂ ಅಧಿಕಾರಿಗಳು ನೀರಾವರಿ ತೆರಿಗೆಯನ್ನು ವಸೂಲು ಮಾಡುತ್ತಿರುವುದು

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ)—ಮಾನ್ಯ ಅಧ್ಯಕ್ಷರೇ ೧೯೮೭-೮೮ನೇ ಸಾಲಿನಲ್ಲಿ ಶಿಕಾರಿಪುರ ತಾಲ್ಲೂಕಿನ ರೈತರು ಭೀಕರ ಬರಗಾಲಕ್ಕೆ ತುತ್ತಾಗಿ ಇದರ ಪರಿಣಾಮ ೧೫೦ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಶೇಕಡ ೨೫ಕ್ಕೂ ಕಡಿಮೆ ಬೆಳೆ ಬಂದಿರುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಸರ್ಕಾರಕ್ಕೆ ವರದಿ ಕಳಿಸಿದ್ದರು. ಸರ್ಕಾರ ೨ ತಿಂಗಳ ಹಿಂದೆ ಕಂದಾಯ ವಸೂಲಿ ಬಗ್ಗೆ ಒಂದು ಆಜ್ಞೆ ಹೊರಡಿಸಿರುವ ಪರಿಣಾಮ ಕಂದಾಯ ಮತ್ತು ನೀರಾವರಿ ತೆರಿಗೆಯನ್ನು ಕಟ್ಟುನಿಟ್ಟಾಗಿ ವಸೂಲು ಮಾಡುತ್ತಾ. ರೈತರಿಗೆ ಅಧಿಕಾರಿಗಳು ಕಿರುಕುಳ ಕೊಡುತ್ತಿದ್ದಾರೆ. ಒಂದು ಹೊತ್ತಿನ ಗಂಜಿಗೂ ಯೋಚಿಸುತ್ತಿರುವ ಬರಗಾಲಕ್ಕೆ ತುತ್ತಾದ ರೈತರಿಂದ ಕಂದಾಯ ಹಾಗೂ ನೀರಾವರಿ ತೆರಿಗೆ ವಸೂಲಿ ಮಾಡದಂತೆ ಅಧಿಕಾರಿಗಳಿಗೆ ಆದೇಶ ನೀಡುವ ಬಗ್ಗೆ ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸಂಬಂಧಪಟ್ಟ ಸಚಿವರಿಂದ ಉತ್ತರ ತರಿಸಿ, ಸನ್ಮಾನ್ಯ ಸದಸ್ಯರಿಗೆ ಒದಗಿಸಿಕೊಡುತ್ತೇನೆ.

(2) ವಿದ್ಯುಚ್ಛಕ್ತಿ ಮಂಡಳಿಯವರಿಂದ ಬಳಕೆದಾರರಿಂದ ತಾರತಮ್ಯವಿರುವ ದರವನ್ನು ವಿಧಿಸಿ ವಸೂಲು ಮಾಡುತ್ತಿರುವುದು

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು) — ಸನ್ಮಾನ್ಯ ಅಧ್ಯಕ್ಷರೇ ಕರ್ನಾಟಕ ರಾಜ್ಯಾದ್ಯಂತ ಈ ತಿಂಗಳಿಂದಲೇ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯವರು ಸುಮಾರು ೫೦ ಲಕ್ಷಕ್ಕೂ ಮೇಲ್ಪಟ್ಟು ಬಡ ಸಂಸಾರಗಳ ಬಳಕೆದಾರರಿಂದ ಲೈಟ್ ಕನೆಕ್ಷನ್‌ಗೆ ಒಂದು ಪೊತ್ತ, ಎ.ಇ.ಹೆಚ್. ಕನೆಕ್ಷನ್‌ಗೆ ಒಂದು ಪೊತ್ತ. ಪ್ರತಿ ಆಕ್ಷರಕ್ಕೂ ಮತ್ತೊಂದು ಪೊತ್ತವೆಂದು ಎಡಾಪಟ್ಟು ಕಟ್ಟುವರಿ ಡಿಪಾಸಿಟ್ ಪಡೆಯಲು ಬಿಲ್‌ಗಳಲ್ಲಿ ಪೊತ್ತವನ್ನು ಅಳವಡಿಸಿ, ಬಲಾತ್ಕಾರ ವಸೂಲಿಗೆ ಹೊರಟಿರುವುದರಿಂದ, ಜನರಲ್ಲಿ ಹಾಹಾಕಾರವೆದ್ದು ಜನತೆ ಇದನ್ನು ಪ್ರತಿಭಟಿಸಲು (ಡಿಪಾಸಿಟ್–೨) ೨ನೇ ಮತ್ತು ೩ನೇ ಡಿಪಾಸಿಟ್‌ನ್ನು ವಸೂಲು ಮಾಡುವ ಆಜ್ಞೆಯನ್ನು ವಾಪಸ್ಸು ಪಡೆಯುವಂತೆ ಒತ್ತಾಯಿಸಲು ಪ್ರತಿಭಟನೆ ಹಾದಿಗೆ ಇಳಿದಿದ್ದಾರೆ ; ಈ ಅನ್ಯಾಯದ ಆಜ್ಞೆಯನ್ನು ವಿದ್ಯುಚ್ಛಕ್ತಿ ಮಂಡಳಿಗೆ ತಿಳಿಸಿ, ಬಲಾತ್ಕಾರ ವಸೂಲಾತಿಯನ್ನು ನಿಲ್ಲಿಸಿ, ಜನತೆಯ ಬೇಬಕ್ಕೆ ಬರುವುದು ಅವಶ್ಯಕ. ಈ ಬಗ್ಗೆ ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಯವರು ಹೇಳಿಕೆಯನ್ನು ಸದನದಲ್ಲಿ ಕೊಡಬೇಕೆಂದು ಕೋರುತ್ತೇನೆ.

ಶ್ರೀ ಲಕ್ಷ್ಮಿನರಸಿಂಹಯ್ಯ.—ಈ ವಿಷಯದಲ್ಲಿ ನಿಮಗೆ ಉತ್ತರ ಒದಗಿಸಿಕೊಡುತ್ತೇನೆ. ಇದರಲ್ಲಿ ಒಂದು ಏನೆಂದರೆ ೨ ಎಂ.ಎಂ.ಡಿ. ಎಂದು ಕಲೆಕ್ಟ್ ಮಾಡುತ್ತಿದ್ದರು. ಈಗ ೩ ಎಂ.ಎಂ.ಡಿ. ಎಂದು